**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 3837/2021**

| | | | |
|---|---|---|---|
| **ಹೆಸರು** | **:** | **ನರೇಶ** | **ಚಾ.ಸಾ.7** |
| **ತಂದೆಯ ಹೆಸರು** | **:** | **ಸೋಮಶೇಖರ** | **ಪ್ರಾ.ಸಾ.5** |
| **ವಯಸ್ಸು** | **:** | **16 ವರ್ಷ** | **ದಿನಾಂಕಃ 20-12-2023** |
| **ಉದ್ಯೋಗ** | **:** | **ವಿದ್ಯಾರ್ಥಿ** | |
| **ವಾಸಸ್ಥಳ** | **:** | **ಪರದರ ಮೋತಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ-1 ನನ್ನ ತಂದೆ. ಚಾಸಾ-4 ನನ್ನ ತಾಯಿ. ಪ್ರಾಸಾ-3 ನಮ್ಮ ಮನೆ ಹತ್ತಿರ ದವರು. ಪ್ರಾಸಾ-4 ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ 1 ರಿಂದ 3 ಮತ್ತು 5 ನೇ ಆರೋಪಿತರು ಹಾಗೂ ಗೈರು ಹಾಜರಿರುವ 4 ನೇ ಆರೋಪಿ ನನಗೆ ಗೊತ್ತು ಅವರು ನನ್ನ ಸಂಬಂಧಿಕರು.

ದಿನಾಂಕ 08-06-2021 ರಂದು ಮಧ್ಯಾಹ್ನ 1 ಗಂಟೆ ಸುಮಾರಿಗೆ ನನ್ನ ತಂದೆ ಮನೆಯಲಿದ್ದರು. ಆ ಸಮಯಕ್ಕೆ ನನ್ನ ತಾಯಿ ಹಾಗೂ ನಾನು ಇದ್ದೇವು. ಆಗ ಐದು ಜನ ಆರೋಪಿತರು ಓಡಿ ಬಂದು ಗಿಡದ ಹಣದ ಸಂಬಂಧ 2 ಮತ್ತು 5 ನೇ ಆರೋಪಿತರು ತಮ್ಮ ಕೈಯಿಂದ ನಮ್ಮ ತಂದೆಯ ಬೆನ್ನಿಗೆ ಹೋಡೆದಿರುತ್ತದೆ.

ನಂತರ ಅದೇ ದಿನ ಸಂಜೆ 5-6 ಗಂಟೆಗೆ ಶಿವರಾಮ ರೆಡ್ಡಿರವರ ಮನೆ ಹತ್ತಿರ ನಾನು ಆಟ ಆಡುತ್ತಿರುವಾಗ 2 ಮತ್ತು 5 ನೇ ಆರೋಪಿತರು ಬೇವಿನ ಕಟ್ಟಿಗೆ ಇಂದ ನನ್ನ ತಂದೆಯ ಕೈಗೆ ಹೊಡೆದಿರುತ್ತಾರೆ. ಆ ಸಮಯಕ್ಕೆ ನನ್ನ ತಂದೆಯ ಎಡಗೈ ಗಾಯವಾಗಿತ್ತು. ಅದೇ ದಿನ ಘಟನೆಯಾದ ನಂತರ ಸುಲೇಪೇಟ ಪೋಲಿಸ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರನ್ನು ನೀಡಿದ್ದೇವೆ.

ಘಟನೆ ಸಮಯಕ್ಕೆ 2 ಮತ್ತು 5 ನೇ ಆರೋಪಿತರು ನನ್ನ ತಾಯಿಯ ಕೂದಲು ಹಿಡಿದು ಎಳೆದಾಡುತ್ತಿದ್ದರು. ನಾವು ದೂರು ನೀಡಲು ಹೋದಾಗ ಪೋಲಿಸರು ದೂರನ್ನು ಪಡೆದಿದ್ದಾರೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**